ಚೆನ್ನಾಗಿದ್ದರೆ, ಜೊತೆಗೆ ಮಕ್ಕಳನ್ನು ನೋಡಿಕೊಳ್ಳಲು ಗಂಡ ಹೆಂಡತಿಗೆ ಸಮಯವಿದ್ದು ಮನೆಯಲ್ಲಿ ನೋಡಿಕೊಳ್ಳಲು ಹಿರಿಯರಿದ್ದರೆ ಖಂಡಿತ ಎರಡನೇ ಮಗುವನ್ನು ಮಾಡಿಕೊಳ್ಳಿ ಎಂದು ನಾನು ಸಲಹೆ ಕೊಡುತ್ತೇನೆ. ಯಾಕೆಂದರೆ, ಭಾವನಾತ್ಮಕವಾಗಿ ಮತ್ತು ಹೆಣ್ಣಿನ ಆರೋಗ್ಯದ ದೃಷ್ಟಿಯಿಂದ ಎರಡನೇ ಮಗು ಪಡೆಯುವುದು ಒಳ್ಳೆಯದು. ಎರಡನೇ ಮಗು ಆದ ಹೆಣ್ಣುಮಕ್ಕಳಿಗೆ ಅಂಡಾಶಯ ಕ್ಯಾನ್ಸರ್ ಬರುವ ಸಾಧ್ಯತೆ ತುಂಬಾ ಕಡಿಮೆ. ಇಬ್ಬರು ಮಕ್ಕಳಿದ್ದಾಗ ತಂದೆ ತಾಯಿಗೆ ಭಾವನಾತ್ಮಕ ಆಸರೆ ಸಿಗುವುದಲ್ಲದೆ, ಮಕ್ಕಳಿಗೂ ಒಡಹುಟ್ಟಿದವರು ಒಬ್ಬರಿಗೊಬ್ಬರು ಅನೇಕ ಸಂದರ್ಭದಲ್ಲಿ ಜೊತೆ ನಿಲ್ಲುತ್ತಾರೆ. ಹಾಗೆ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ತಂದೆ ತಾಯಿಯ ಮೇಲಿರುತ್ತದೆ.

ಎರಡನೇ ಮಗು ಬೇಕಿರುತ್ತದೆ; ಆದರೆ ಯಾವಾಗ ಬೇಕು ಎಂಬ ಬಗ್ಗೆ ನಿರ್ಧರಿಸದೆ ಆಕಸ್ಮಿಕವಾಗಿ ಗರ್ಭಧರಿಸಿ ಅಬಾರ್ಷನ್‌ಗೆಂದು ಬರುತ್ತಾರೆ. ಹೀಗೆ ತುಂಬ ನಿಷ್ಕಾಳಜಿಯಿಂದ ದೇಹಕ್ಕೆ ತೊಂದರೆ ಮಾಡಿಕೊಳ್ಳುವುದನ್ನು ಕಂಡಾಗ ಬೇಸರ ಆಗುತ್ತದೆ. ಅಬಾರ್ಷನ್ ದೈಹಿಕ ಸುಸ್ತಲ್ಲದೆ, ಮಾನಸಿಕ ಸುಸ್ತು ಕೂಡ. ಅಬಾರ್ಷನ್ ಆದ ಮೇಲೆ ಡಾಕ್ಟರ್ ಬಳಿ ಕೂತು ಮಾತನಾಡುವ, ಡಾಕ್ಟರ್ ಅನ್ನು ಆಪ್ತ ಸಹಾಯಕರು ಎಂದು ಪರಿಗಣಿಸುವ ಪರಿಪಾಠ ನಮ್ಮಲ್ಲಿ ಹೆಚ್ಚು ಬೆಳೆಯಬೇಕು. ಅಬಾರ್ಷನ್ ನಂತರ ಎರಡನೇ ಮಗು ಬೇಕೆಂದರೆ ಯಾವಾಗ ಮಾಡಿಕೊಳ್ಳಬಹುದು? ದೇಹ ಇದರಿಂದ ಯಾವಾಗ ಚೇತರಿಸಿಕೊಳ್ಳುತ್ತದೆ ಎಂಬಂತಹ ಸಾಮಾನ್ಯ ಪ್ರಶ್ನೆ ಸಹ ಎಷ್ಟೋ ಜನ ಕೇಳುವುದಿಲ್ಲ.

ಎರಡನೇ ಮಗುವಿನ ವಿಚಾರದಲ್ಲಿ ಗಂಡೇ ಆಗಬೇಕು, ಹೆಣ್ಣೇ ಆಗಬೇಕು ಎಂದು ಬರುವವರ ಸಂಖ್ಯೆ ಬಹಳ ದೊಡ್ಡದಿದೆ. ಬಯಸಿದ ಮಗು ಆಗದೆ ಇದ್ದಾಗ, 'ನಿಮಗೆ ಯಾರಾದರೂ ಗೊತ್ತಿದ್ದರೆ ಹೇಳಿ, ಕೊಟ್ಟು ಬಿಡ್ತೇವೆ' ಎಂದವರೂ ಇದ್ದಾರೆ. ದಿನಕ್ಕೆ ಒಂದಾದರೂ ಈ ರೀತಿಯ ಪ್ರಕರಣ ನನ್ನ ಬಳಿ ಇರುತ್ತದೆ. ಎರಡನೇ ಮಗುವೂ ಗಂಡು ಹುಟ್ಟಿದಾಗ ಇದು ನಡೆದಿಲ್ಲ. ಆದರೆ ಎರಡನೇ ಮಗು ಸಹ ಹೆಣ್ಣು ಹುಟ್ಟಿದಾಗ ಹೀಗೆ ನಡೆದಿದೆ.

ಸುಶಿಕ್ಷಿತ ಕುಟುಂಬದ ಡಾಕ್ಟರ್, ಎಂಜಿನಿಯರ್‌ನಂತಹ ಕೆಲಸದಲ್ಲಿರುವವರೂ ಎರಡನೇ ಮಗುವೂ ಹೆಣ್ಣಾದಾಗ ತಿರಸ್ಕರಿಸಿದ್ದನ್ನು ನೋಡಿದ್ದೇನೆ. ನಾವು ಬಹಳ ಮುಂದುವರೆದಿದ್ದೇವೆ ಹೌದು, ಆದರೆ ಎರಡನೇ ಹೆಣ್ಣುಮಗುವಿನ ವಿಚಾರದಲ್ಲಿ ಸಾಕಷ್ಟು ಹಿಂದೆ ಇದ್ದೇವೆ. ಮೊದಲನೆಯದು ಹೆಣ್ಣು ಮಗುವಾಗಿ, ಎರಡನೇ ಗರ್ಭಧರಿಸಿದ ತಾಯಿಯ ಮೇಲೆ ಗಂಡು ಮಗು ಹಡೆಯಬೇಕೆಂಬ ಒತ್ತಡ ಕುಟುಂಬದ ಮೇಲೆ ಎಷ್ಟಿರುತ್ತದೆ ಎಂದರೆ, ಆಕೆ ಗರ್ಭಾವಧಿಯಲ್ಲಿ ಮಾನಸಿಕವಾಗಿ ಹೈರಾಣಾಗಿ ಹೋಗಿರುತ್ತಾಳೆ. ಈ ಪರಿಸ್ಥಿತಿ ಬದಲಾಗಬೇಕು. ಎರಡನೇ ಮಗು ಬೇಕು ಎಂದು ನಿರ್ಧರಿಸಿದ ಮೇಲೆ ಹೆಣ್ಣಾದರೂ ಸರಿ, ಗಂಡಾದರೂ ಸರಿ, ಅದನ್ನು ಒಪ್ಪಿಕೊಳ್ಳಬೇಕು.



ಉಳಿದು, ಕೊನೆಗೆ ಕುಟುಂಬದ ಅಥವಾ ಗಂಡನ ಒತ್ತಡಕ್ಕೋ, ಆಕಸ್ಮಿಕವಾಗಿ ಆದ ಗರ್ಭವನ್ನು ತೆಗೆಸಬಾರದು ಎಂಬ ಕಾರಣಕ್ಕೋ ಎರಡನೇ ಮಗು ಮಾಡಿಕೊಳ್ಳುವಲ್ಲಿ ಪರ್ಯಾವಸಾನಗೊಳ್ಳುತ್ತದೆ.

'ಪೇರೆಂಟ್ರೀ'ಯಲ್ಲಿ ಮಹಿಳೆ ಕೇಳಿದ ಪ್ರಶ್ನೆಗೆ ಬಂದಿರುವ ಉತ್ತರಗಳೂ ಪ್ರೌಢವಾಗಿವೆ. ಒಂದು ಉತ್ತರ ಹೀಗಿದೆ:

''ನಿಮ್ಮ ಗಂಡ ಮನೆಯಲ್ಲಿ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದಾದರೆ, ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ ಎಲ್ಲವನ್ನು ನಿಭಾಯಿಸಿಕೊಂಡು ಹೋಗುತ್ತೀರಿ ಎಂದಾದರೆ, ನೀವು ಎರಡನೇ ಮಗುವಿನ ಬಗ್ಗೆ ಆಲೋಚಿಸಬಹುದು. ನಿಮ್ಮ ಮಗು ಬೆಳೆದಾಗ ಖಂಡಿತವಾಗಿಯೂ ಅದಕ್ಕೊಂದು ಒಡಹುಟ್ಟು ಬೇಕು ಎನ್ನಿಸಬಹುದು. ನಮ್ಮ ಮತ್ತು ಮಕ್ಕಳ ನಡುವೆ ವಯಸ್ಸಿನ ಅಂತರ ಇರುವುದರಿಂದ ನಮಗಿಂತ ಹೆಚ್ಚು ಒಡಹುಟ್ಟಿದವರ ಜೊತೆಗೇ ಅವರಿಗೆ ಸಲಿಗೆ ಇರುತ್ತದೆ. ಪರಸ್ಪರ ಅರ್ಥಮಾಡಿಕೊಂಡು ಭಾವುಕವಾಗಿ ಬೆಂಬಲ

> ನಾನು ಈ ಬಗ್ಗೆ ಎಂದೂ ಯೋಚನೆ ಮಾಡಿಯೇ ಇರಲಿಲ್ಲ. ಆದರೆ ನನಗೆ, ನನ್ನ ಅಕ್ಕ ಬಿಟ್ಟಿದ್ದೆಲ್ಲವನ್ನೂ ನಾನು ಬಳಸಬೇಕು ಅಂತ ಬೇಜಾರಿದೆ. ಅಪ್ಪ–ಅಮ್ಮನಿಗೆ ಗಂಡು ಮಗು ಆಸೆ ಇತ್ತಂತೆ. ಆದರೆ ನಾನು ಹೆಣ್ಣು ಮಗು ಎಂದಾಗ ಬೇಸರ ಮಾಡಿಕೊಂಡರೂ, ನನ್ನನ್ನು ಕಡೆಗಣನೆ ಏನೂ ಮಾಡಿಲ್ಲ.
>
> **-ಶಾಶ್ವತಾ ಎಂ.ಕೆ.**
>
> ಬಿ.ಕಾಂ. ವಿದ್ಯಾರ್ಥಿನಿ